**ಓ ಎಸ್ 145/2023 ಡಿಡಬ್ಲ್ಯೂ3**

**ಸಾಕ್ಷಿಯನ್ನು ದಿಃ 08.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ ಡಿ ಡಡಬ್ಲ್ಯೂ 2 ರವರ ಪಾಟೀಸವಾಲನ್ನು ಅಳವಡಿಸಿಕೊಂಡು ಮುಂದುವರಿದ ಪಾಟೀ ಸವಾಲುಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿನ ಸಂಗತಿಗಳು ನನಗೆ ಗೊತ್ತಿವೆ, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ವ್ಯವಹಾರ ನನಗೆ ಎಲ್ಲಾ ಗೊತ್ತಿದೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಈಗ ನೋಡಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸುಮಾರು 25 ವರ್ಷಗಳ ಹಿಂದೆ ನೋಡಿದ್ದೇನೆ. ಜಮೀನುಗಳ ಹಾಗೂ ಮನೆಗಳ ಸರ್ವೆ ನಂಬರು ಹಾಗೂ ಅಸೆಸ್ ಮೆಂಟ್ ನಂಬರು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯನ್ನು ಬರೆಸುವಾಗ ದಾವಾ ಆಸ್ತಿಗಳ ಸರ್ವೆ ನಂಬರು ಹಾಗೂ ವಿಸ್ತೀರ್ಣ ನನಗೆ ಗೊತ್ತಿರಲಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ದಾವಾ ಆಸ್ತಿಗಳ ಸರ್ವೆ ನಂಬರು ಹಾಗೂ ವಿಸ್ತೀರ್ಣವನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಷೆಡ್ಯೂಲ್ ನಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ, ಆದರೆ ವಾದಿ ತಿಮ್ಮೇಗೌಡರು ಮಾರಾಟ ಮಾಡಿರುವ 2 ಆಸ್ತಿಗಳು ಇವೆ ಎಂದು ಮಾತ್ರ ಗೊತ್ತು. ಆ ಎರಡು ಆಸ್ತಿಗಳ ಸರ್ವೆ ನಂ. 12/10 ಹಾಗೂ 21/10. ಹಾಗೆ ಮಾರಾಟ ಮಾಡಿದ ಸಂಬಂಧ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ವಾದಿ ತಿಮ್ಮೇಗೌಡರು ಸಣ್ಣೇಗೌಡರಿಗೆ ಮತ್ತು ವೆಂಕಟೇಶ್ ರವರಿಗೆ ತಲಾ 0.20 ಗುಂಟೆಯಂತೆ ಮಾರಾಟ ಮಾಡಿದ್ದಾರೆ. 2000 ನೇ ಇಸವಿಯಲ್ಲಿ ಮಾರಾಟ ಮಾಡಿದ್ದಾರೆ. ದಿನಾಂಕ ನನಗೆ ಗೊತ್ತಿಲ್ಲ. ತಲಾ ರೂ. 40 ಸಾವಿರದಂತೆ ಮಾರಾಟ ಮಾಡಿದ್ದಾರೆ. ಈ ಸಂಬಂಧ ನಾನು ಯಾವುದೇ ದಾಖಲೆಯನ್ನು ನೋಡಿಲ್ಲ.

ದಾವಾ ಷೆಡ್ಯೂಲ್ ಐಟಂ ನಂ. 8 ಸರ್ವೆ ನಂ. 27/10 ರಲ್ಲಿ ಒಟ್ಟು ಎಷ್ಟು

ಜಮೀನು ಇದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಆ ಜಮೀನು ವಾದಿ ಮತ್ತು ಪ್ರತಿವಾದಿಗಳ ತಂದೆಯ ಜಮೀನು. ದಾವಾ ಷೆಡ್ಯೂಲ್ ಐಟಂ ನಂ. 8 ರ ಜಮೀನಿನಲ್ಲಿ ಯಾರು ಯಾರು ಎಷ್ಟೆಷ್ಟು ಹಂಚಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ನ ಇತರೆ ಆಸ್ತಿಗಳನ್ನು ಯಾರು ಯಾರು ಎಷ್ಟೆಷ್ಟು ಹಂಚಿಕೊಂಡಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತುಗಳ ಹಂಚಿಕೆ ಮಾಡಿಕೊಳ್ಳದೆ ಇರುವ ಕಾರಣ ಯಾರು ಯಾರಿಗೆ ಎಷ್ಟೆಷ್ಟು ಹಂಚಿಕೆಯಾಗಿದೆ ಎಂದು ನನಗೆ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ವಾದಿ ಮತ್ತು ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಖಾತೆಯಾಗಿವೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ತಂದೆ ತಿರುಮಲೇಗೌಡರು ತೀರಿಕೊಂಡ ನಂತರ ಹಾಗೆ ಪೌತಿ ಜಂಟಿ ಖಾತೆಯಾಗಿದೆ ಎಂದರೆ ಸರಿ. ಗೋವಿಂದೇಗೌಡರಿಗೆ ಮಂಜೂರಾಗಿದೆ ಎಂದು ಹೇಳುತ್ತಿರುವ ಸರ್ವೆ ನಂ. 9 ರ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಎಲ್ಲರಿಗೂ ಭಾಗಾಂಶದ ಹಕ್ಕು ಇದ್ದರೂ ಸಹ ವಾದಿಗೆ ಆ ಜಮೀನಿನಲ್ಲಿ ಭಾಗಾಂಶದ ಹಕ್ಕನ್ನು ತಪ್ಪಿಸುವ ಸಲುವಾಗಿ ಪ್ರತಿವಾದಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕೊಳವೆ ಬಾವಿಯನ್ನು ಯಾರು, ಯಾವಾಗ ಮತ್ತು ಯಾವ ಸರ್ವೆ ನಂಬರು ಆಸ್ತಿಯಲ್ಲಿ ಕೊರೆಸಿದ್ದಾರೆ ಎಂದು ಸರಿಯಾಗಿ ನನಗೆ ಮಾಹಿತಿ ಇಲ್ಲ. ತಿಮ್ಮೇಗೌಡರ ಮಗಳ ಮದುವೆ ನಡೆದು ಸುಮಾರು 10 ರಿಂದ 12 ವರ್ಷವಾಗಿರಬಹುದು. ಅಂತಹ ಮದುವೆಗಾಗಿ ತಿಮ್ಮೇಗೌಡರು ಜಮೀನು ಮಾರಾಟ ಮಾಡುತ್ತೇನೆ ಎಂದು ಹೇಳಿ ಯಾರಿಂದಲೂ ಸಹ ಗೋವಿಂದೇಗೌಡರು ಮನೆ ಕಟ್ಟಿಕೊಂಡಿರುವ ಜಾಗ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡದೆ ಇದ್ದರೂ ಮತ್ತು ಅಂತಹ ಯಾವುದೇ ವಿಭಾಗ ಆಗದೆ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಅವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ವಾದಿ ತಿಮ್ಮೇಗೌಡರಿಗೆ ಆಸ್ತಿ ಬರಬಾರದು ಎಂದು ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಹಣ ಪಡೆದುಕೊಳ್ಳದೆ ಇದ್ದರೂ ಸಹ ಪ್ರತಿವಾದಿಗಳ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತಿಮ್ಮೇಗೌಡರ ಮಗಳು ಶಾರದಾ ತನ್ನ ಗಂಡನ ಜೊತೆಯಲ್ಲಿಯೇ ಇದ್ದಾರೆ ಎಂದರೆ ಸರಿ. ವಾದಿಯ ಮಗಳು ಶಾರದಾ ತನ್ನ ತಂದೆಯಿಂದ ಯಾವುದೇ ರೀತಿಯ ಹಣದ ಅಪೇಕ್ಷೆ ಪಡದೆ ತಾನು ಹಾಗೂ ತನ್ನ ಗಂಡ ಸ್ವಂತವಾಗಿ ದುಡಿದು ಜೀವನ ನಡೆಸಿಕೊಂಡು ಆಸ್ತಿಗಳನ್ನು ಸಂಪಾದಿಸಿದ್ದಾರೆ ಎಂದರೆ ಸರಿಯಲ್ಲ, ಶಾರದಾರವರು ತನ್ನ ಗಂಡನ ಜೊತೆಯಲ್ಲಿ ಬೇರೆಯೇ ಇದ್ದಾರೆ. ಗೋವಿಂದೇಗೌಡರಿಗೆ ಬಂದಿದೆ ಎಂದು ಹೇಳುತ್ತಿರುವ ಗೋಮಾಳ ಭೂಮಿಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಇರಬಹುದು. ಗೋವಿಂದೇಗೌಡರು ಮನೆ ಕಟ್ಟಿಕೊಂಡಿರುವ ಜಾಗ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡದೆ ಇದ್ದರೂ ಮತ್ತು ಅಂತಹ ಯಾವುದೇ ವಿಭಾಗ ಆಗದೆ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಅವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಿಮ್ಮೇಗೌಡರಿಗೆ ಆಸ್ತಿ ಬರಬಾರದು ಎಂದು ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**